ಸೃಜನಿ

I S S N: 2583-3510

SIRDF JOURNALS

SRUJANI: Indian Journal of Innovative Research and Development (SIJIRD)
Volume-3 Issue 1, March-April 2024, Pp. 129-132
Bi-Monthly, Peer-Reviewed, Open Access, Indexed Journal

editor@srujani.in
www.srujani.in

# ಕಣಿಯ ಬುಡಕಟ್ಟು ಸಮುದಾಯದ ಆರ್ಥಿಕ ಜೀವನ : ಒಂದು ವಿಶ್ಲೇಷಣೆ

**ಲೋಕೇಶ್ ಮೂರ್ತಿ. ಆರ್.**
ಸಂಶೋಧನಾ ವಿದ್ಯಾರ್ಥಿ, ಇತಿಹಾಸ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳೂರು.

**Abstract:**
*ಭಾರತ ದೇಶವು ವಿವಿಧ ಸಂಸ್ಕೃತಿಗಳ ನಾಡು ಭಾರತವು ವಿವಿಧತೆಯಲ್ಲಿ ಏಕತೆ ಸಾಧಿಸಿರುವಂತಹ ದೇಶವಾಗಿದೆ. ನಮ್ಮ ದೇಶ ಇಡೀ ವಿಶ್ವದಲ್ಲೇ ಜ್ಯಾತ್ಯತೀತ ರಾಷ್ಟವಾಗಿದೆ. ಭಾರತದಲ್ಲಿ ಸಾವಿರಾರು ಸಮುದಾಯಗಳು ನೆಮ್ಮದಿ, ಶಾಂತಿ, ಸೌಹರ್ದಯುತವಾಗಿ ಜೀವನ ಸಾಗಿಸುತ್ತಿವೆ. ಆ ಸಮುದಾಯಗಳಲ್ಲಿ ಬುಡಕಟ್ಟು ಸಮುದಾಯವು ಕೂಡ ಒಂದು. ಬುಡಕಟ್ಟು ಸಮುದಾಯಗಳ ಅಧ್ಯಯನ ಬಹಳ ಪ್ರಾಮುಖ್ಯತೆ ಪಡೆದುಕೊಂಡಿದೆ. ಕರ್ನಾಟಕದಲ್ಲಿ ಹಲವಾರು ಬುಡಕಟ್ಟು ಜನರು ತಮ್ಮದೇ ಆದ ರೀತಿಯಲ್ಲಿ ಜೀವನ ನಿರ್ವಹಣೆ ಮಾಡುತ್ತಿದ್ದಾರೆ. ನಮ್ಮ ರಾಜ್ಯದಲ್ಲಿ ಜೇನುಕುರುಬ, ಬೆಟ್ಟಕುರುಬ, ಸೋಲಿಗ, ಯೆರವ, ಹಕ್ಕಿಪಿಕ್ಕಿ, ಹಸಲರು, ಮಲೇರು, ಮಲೆಕುಡಿಯ, ಕಣಿಯನ್ ಮುಂತಾದ ಬುಡಕಟ್ಟು ಸಮುದಾಯಗಳು ಕಂಡುಬರುತ್ತದೆ. ಪ್ರಸ್ತುತ ಲೇಖನದಲ್ಲಿ ಕಣಿಯನ್ ಬುಡಕಟ್ಟು ಸಮುದಾಯದ ಆರ್ಥಿಕ ಜೀವನ ಕುರಿತು ಅಧ್ಯಯನ ಮಾಡಲಾಗಿದೆ.*

**Keywords:** *ಬುಡಕಟ್ಟು ಸಮುದಾಯ, ಕಣಿಯನ್ ಸಮುದಾಯ, ಆರ್ಥಿಕ ಜೀವನ, ಅಭಿವೃದ್ಧಿ.*

## ಪೀಠಿಕೆ

ಕಣಿಯನ್ ಬುಡಕಟ್ಟು ಸಮುದಾಯ ವಿಶಿಷ್ಟವಾದ ಬುಡಕಟ್ಟು ಸಮುದಾಯವಾಗಿದೆ. ಈ ಸಮುದಾಯವು ಕರ್ನಾಟಕವಲ್ಲದೆ ನೆರೆಯ ರಾಜ್ಯಗಳಾದ ತಮಿಳುನಾಡು ಮತ್ತು ಕೇರಳ ರಾಜ್ಯಗಳಲ್ಲೂ ಕಂಡುಬರುತ್ತಾರೆ. ಈ ಸಮುದಾಯವನ್ನು ಕಣಿಯ, ಕಣಿಯರು, ಕಣಿಯನ್, ಕಣಿಯರ್, ಕನ್ಯಾನ್, ಬಲ್ಯಾಯ, ದಾಸರು, ತಿರುಕುಳ್‌ದಾಸರು, ಎಂಬ ವಿವಿಧ ನಾಮಾಂಕಿತಗಳಿಂದಲೂ ಕರೆಯುವುದುಂಟು. ಕಣಿಯ ಸಮುದಾಯ ತಮ್ಮದೇ ಆದ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ವಿಶಿಷ್ಟ ಚಹರೆಗಳನ್ನು ಹೊಂದಿರುವ ಸಮುದಾಯವಾಗಿದೆ. ಇವರು ಕರ್ನಾಟಕದ ಚಾಮರಾಜನಗರ, ಮೈಸೂರು, ಬೆಂಗಳೂರು, ಕೋಲಾರ, ತುಮಕೂರು, ಮಂಡ್ಯ, ಹಾಸನ, ರಾಮನಗರ, ದಕ್ಷಿಣ ಕನ್ನಡ ಮುಂತಾದ ಜಿಲ್ಲೆಗಳಲ್ಲಿ ಕಂಡುಬರುತ್ತಾರೆ. ಕರ್ನಾಟಕದಲ್ಲಿ ಈ ಸಮುದಾಯದವರು ಹೆಚ್ಚಾಗಿ ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುತ್ತಿದ್ದಾರೆ. ಕಣಿಯರು ತಮ್ಮ ಜೀವನ ನಿರ್ವಹಣೆಗೆ ಹಿಂದಿನ ಕಾಲದಲ್ಲಿ "ಕಣಿ" ಹೇಳುವುದು, ಜ್ಯೋತಿಷ್ಯ ಹೇಳುವುದು, ಮಾಟಮಂತ್ರ ವಾಮಚಾರ ಮಾಡುವುದು, ನಾಟಿಔಷಧ ನೀಡುವುದನ್ನು ಮಾಡುತ್ತಿದ್ದರು. ಆದರೆ ಇತ್ತೀಚಿನ ದಿನಗಳಲ್ಲಿ ಹೆಚ್ಚಿನ ಜನರು ತಮ್ಮ ಸಾಂಪ್ರದಾಯಿಕ ವೃತ್ತಿಯಿಂದ ವಿಮುಖರಾಗಿ ವ್ಯವಸಾಯ, ಕೃಷಿಕೂಲಿ,

**Please cite this article as:** ಲೋಕೇಶ್ ಮೂರ್ತಿ. ಆರ್. (2024). ಕಣಿಯ ಬುಡಕಟ್ಟು ಸಮುದಾಯದ ಆರ್ಥಿಕ ಜೀವನ: ಒಂದು ವಿಶ್ಲೇಷಣೆ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 3(1), 129–132.

ಪಶುಪಾಲನೆ, ಕಿರು–ವ್ಯಾಪಾರ ಮತ್ತು ಕಟ್ಟಡ ಕಾರ್ಮಿಕರಾಗಿ ದುಡಿಯುತ್ತಿದ್ದಾರೆ.

ಕಣಿಯ ಬುಡಕಟ್ಟು ಸಮುದಾಯದ ಆಹಾರ ಪದ್ಧತಿ, ಉಡುಗೆ–ತೊಡುಗೆ, ಉದ್ಯೋಗ, ವಿವಾಹ, ನಾಮಕರಣ, ಶವಸಂಸ್ಕಾರ ಮುಂತಾದ ಭೌತಿಕ ಮತ್ತು ಅಭೌತಿಕ ಸಂಸ್ಕೃತಿ ವಿಶಿಷ್ಟವಾಗಿದೆ. ಈ ಸಮುದಾಯವನ್ನು ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ತಾಲೂಕಿನಲ್ಲಿ ಮಾತ್ರ ಪರಿಶಿಷ್ಟ ಬುಡಕಟ್ಟು ಪಟ್ಟಿಗೆ ಸೇರಿಸಿದಲಾಗಿದೆ. ಕೊಳ್ಳೇಗಾಲೇತರ ಪ್ರದೇಶಗಳಲ್ಲಿ ನೆಲೆಸಿರುವವರನ್ನು ಪ್ರವರ್ಗ–2ಎ ಪಟ್ಟಿಗೆ ಸೇರಿಸಲಾಗಿದೆ. ಕರ್ನಾಟಕದಲ್ಲಿ ಕಂಡುಬರುವ ಇತರೆ ಪರಿಶಿಷ್ಟ ಬುಡಕಟ್ಟು ಸಮುದಾಯಗಳ ಜೀವನ ಪರಿಸ್ಥಿತಿಗೂ ಕಣಿಯರ ಜೀವನ ಸ್ಥಿತಿಗತಿಗಳಿಗೂ ವ್ಯತ್ಯಸವಿರುವುದನ್ನು ಕಾಣಬಹುದೆಂಬ ಬಿ.ಎಲ್. ರೈಸ್ ಅಭಿಪ್ರಾಯಪಟ್ಟಿದ್ದಾರೆ.

**ಕಣಿಯ ಬುಡಕಟ್ಟು ಸಮುದಾಯದ ಹಿನ್ನೆಲೆ**

ಕಣಿಯ ಬುಡಕಟ್ಟು ಸಮುದಾಯ ಪ್ರಾಚೀನತೆಯ ಕುರುಹಾಗಿದ್ದು ತನ್ನದೇ ಆದಂತ ಐತಿಹ್ಯ ಮತ್ತು ಪಾರಂಪರಿಕ ಸಾಂಸ್ಕೃತಿಕ ನೆನಪುಗಳನ್ನು ಹೊಂದಿರುವ ವಿಶಿಷ್ಟವಾದ ಬುಡಕಟ್ಟು ಸಮುದಾಯವಾಗಿದೆ, ಕಣಿಯರು ಮೂಲತಃ ಕೇರಳದ ಮಲಬಾರ್[1] ಪ್ರಾಂತ್ಯದಿಂದಲೂ ಹಾಗೂ ತಮಿಳುನಾಡಿನ ಕುಂಭಕೋಣಂ ನಿಂದ ವಲಸೆ ಬಂದು ಕರ್ನಾಟಕದ ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ತಾಲೂಕಿನ ಹಲವಾರು ಹಳ್ಳಿಗಳಲ್ಲಿ, ಬೆಟ್ಟ ಗುಡ್ಡ ಪ್ರದೇಶಗಳಲ್ಲಿ ವಾಸಮಾಡಲು ಪ್ರಾರಂಭಿಸಿದರು, ಕಣಿಯರು ಯಾವ ಕಾಲದಲ್ಲಿ ವಲಸೆ ಬಂದರು ಎಂಬುದಕ್ಕೆ ನಿಖರವಾದ ಯಾವುದೇ ದಾಖಲೆಗಳಿಲ್ಲ ಕಣಿಯ ಪದದ ರೂಪಾಂತರವನ್ನು ದೃಷ್ಠಿಸಿ ನೋಡಿದಾಗ ಇದಕ್ಕೆ ಪರ್ಯಾಯ ಪದಗಳು ಜಂಟಿಯಾಗಿರುವುದು ಕಾಣುತ್ತದೆ ಈ ಪದಗಳು ಕನ್ನಡ, ತಮಿಳು, ಮಲೆಯಾಳಂ ಭಾಷೆಗಳಿಗೆ ಸೇರಿದ್ದಾಗಿದೆ. ತಮಿಳು ಭಾಷೆಯಲ್ಲಿ ಕಣಿಯನ್ ಮತ್ತು ಕಣ್ಯನ್ ಎಂದೂ, ಮಲೆಯಾಳಂ ಭಾಷೆಯಲ್ಲಿ ಕಣಿ, ಕಣಿಕ್ಕಾರ್, ಕಣಿಯನ್, ಕಣಿಸನ್, ಬಲ್ಯಾಯ ಎಂಬುದಾಗಿಯೂ, ಕನ್ನಡ ಭಾಷೆಯಲ್ಲಿ ಕಣಿ, ಕಣಿಯರ್, ಕಣಿಯರು, ಎಂಬ ಪರ್ಯಾಯ ಹೆಸರುಗಳಿಂದ ಗುರುತಿಸಲಾಗುತ್ತದೆ.

ಕಣಿಯರನ್ನು ದಾಸರು, ತಿರುಕುಲದಾಸ ಎಂಬ ಉಪನಾಮಗಳಿಂದಲೂ ಕರೆಯುತ್ತಾರೆ, ತಿರು ಎಂಬ ಪದವು ತಮಿಳು ಭಾಷೆಯ ಮೂಲ ಪದವಾಗಿದ್ದು ತಮಿಳಿನಲ್ಲಿ ತಿರು ಎಂದರೆ ಶ್ರೀ ಎಂಬ ಅರ್ಥವಿದೆ. ಇದರನ್ವಯ ಕಣಿಯ ಜನರು ಪ್ರತಿ ಶನಿವಾರವು ತೋಳಿಗೆ ಜೋಳಿಗೆ ಧರಿಸಿ ಶಿವ ನಾರಾಯಣ ಗೋವಿಂದ....... ಗೋವಿಂದ....... ಎಂದು ಭಕ್ತಿಯ ನಾಮಜಪಿಸುತ್ತಾ ಮನೆ ಮನೆಗಳನ್ನು ಸುತ್ತುತ್ತಾ ಭಿಕ್ಷಾಟನೆಯನ್ನು ಮಾಡುತ್ತಾರೆ ಹಾಗಾಗಿ ಇವರ ನೆರೆಹೊರೆಯವರು ಇವರನ್ನು ದಾಸರೆಂದು ಕರೆಯುತ್ತಾರೆ.

ಪ್ರಾಚೀನ ಪುರಾಣ ಮತ್ತು ಮಹಾಕಾವ್ಯಗಳಾದ ರಾಮಾಯಣ, ಮಹಾಭಾರತ, ಪ್ರಹ್ಲಾದ ಚರಿತ್ರೆಗಳಲ್ಲಿ ಕಣಿಯ ಸಮುದಾಯದ ಬಗ್ಗೆ ಪ್ರಸ್ತಾಪಿಸಲಾಗಿದೆ. ಕಣಿಯ ಕೇಳ ಬಂದೆ ನಾನು ಕಣಿಯ ಕೇಳೆನೀನು ಎಂದೇಳುತ್ತಾ ದೇವಸ್ಥಾನದಲ್ಲಿ ಸೇರಿ ಕಣಿಯ ನಿಂದ ಆಯುಧ ಪೂಜೆಗೆ ಒಂದು ಮುಹೂರ್ತ ಗೊತ್ತು ಪಡಿಸಿಕೊಂಡರು ಆದಿಮ ಕಾಲದಿಂದಲೂ ಕಣಿಯ ಜನರು ಕಣಿ ಬಗ್ಗೆ ಅಪಾರವಾದ ನಂಬಿಕೆಯುಳ್ಳವರಾಗಿದ್ದಾರೆ.

**ಕಣಿಯರ ಆರ್ಥಿಕ ಜೀವನ (ಆರಂಭದಿಂದ ಕ್ರಿ.ಶ. 1973 ರವರೆಗೆ)**

**ಕಣಿ ಹೇಳುವುದು**

ಕಣಿ ಹೇಳುವುದು ಕಣಿಯನ್ ಸಮುದಾಯದ ಸಾಂಪ್ರದಾಯಿಕ ವೃತ್ತಿಯಾಗಿದೆ. ಇದಲ್ಲದೆ ಜ್ಯೋತಿಷ್ಯ ಹೇಳುವುದು, ಮಾಟ–ಮಂತ್ರ, ವಾಮಚಾರ ಮಾಡುವುದು ಕೂಡ ಸಾಂಪ್ರದಾಯಿಕ ವೃತ್ತಿಯಾಗಿದೆ. ಶತ–ಶತಮಾನಗಳಿಂದಲೂ ಕಣಿಯರು ಇತರೆ ಸಮುದಾಯದವರಿಗೆ, ಕಣಿ ಹೇಳುವುದು, ಜಾತಕ

ವಿಶ್ಲೇಷಣೆ ಮಾಡುವುದು, ದೆವ್ವ ಬಿಡಿಸುವುದು, ಮಾಟಮಂತ್ರ ಮಾಡಿಕೊಡುವುದು, ಯಂತ್ರ ಕಟ್ಟುವುದು, ಬಲಿತೆಗೆಯುವುದು, ದೃಷ್ಟಿ ತೆಗೆಯುವುದು, ದೇಸ್‌ಕಟ್ಟು ಮಾಡಿಕೊಡುವುದು, ವಸ್ತುಪುರುಷ ಸ್ಥಾಪನೆ ಮಾಡಿಕೊಡುವುದು, ವಾಮಚಾರ ಪ್ರಯೋಗವಾಗಿದ್ದರೆ ಅದನ್ನು ತೆಗೆಯುವುದು, ಕಣಿಯರು ಹಿಂದೆ ಅವರೆ ಪೌರೋಹಿತ್ಯ ಮಾಡಿಕೊಳ್ಳುವುದರ ಜೊತೆಗೆ ಇತರೆ ಸಮುದಾಯದವರಿಗೂ ಕೂಡ ಪೌರೋಹಿತ್ಯ ಮಾಡುತ್ತಿದ್ದರು. ಕಣಿಯರು ಅವರು ಮಾಡುವ ಕೆಲಸಕ್ಕೆ ಅಕ್ಕಿ, ಕಾಳು, ಹಣ್ಣು, ಮೊಟ್ಟೆ, ಕೋಳಿ, ಮೇಕೆ, ಧವಸ ಧಾನ್ಯಗಳನ್ನು ಪಡೆದುಕೊಳ್ಳುತ್ತಿದ್ದರು. ಕೆಲವರು ಧಾನ್ಯದ ಜೊತೆಗೆ ಹಣವನ್ನೂ ದಕ್ಷಿಣೆ ರೂಪದಲ್ಲಿ ನೀಡುತ್ತಿದ್ದರು ಇದರಿಂದ ಮಾತ್ರ ಇವರ ಜೀವನ ನಡೆಯುತಿತ್ತು.

**ನಾಟಿ ಔಷಧ ನೀಡುವಿಕೆ**

ಕಣಿಯರು ಬಿಳಿಗಿರಿರಂಗನಬೆಟ್ಟ, ಮಹದೇಶ್ವರನಬೆಟ್ಟದ ಸುತ್ತ–ಮುತ್ತಲಿನ ಹಳ್ಳಿಗಳಲ್ಲಿ ವಾಸ ಮಾಡುತ್ತಿದ್ದರು ಹಾಗೂ ಇವರು ಪಾರಂಪರಿಕ ಚಿಕಿತ್ಸಾ ಪದ್ಧತಿಯ ಬಗ್ಗೆ ಅಪಾರ ಜ್ಞಾನವನ್ನು ತಮ್ಮ ಪೂರ್ವಜರಿಂದ ಪಡೆದುಕೊಂಡಿದ್ದರು. ಕಾಡಿನಲ್ಲಿ ಸಿಗುವ ಗಿಡಮೂಲಿಕೆಗಳನ್ನು ಬಳಸಿ ಪಾರ್ಶ್ವವಾಯು, ಜ್ವರ, ಮೂಳೆಮುರಿತ, ಮಂಡಿ/ಕೀಲು ನೋವು, ಕೆಮ್ಮು, ಕಿಡ್ನಿ ಸಮಸ್ಯೆ, ಹೆರಿಗೆ ಮುಂತಾದ ಸಮಸ್ಯೆಗಳಿಗೆ ಚಿಕಿತ್ಸೆ ನೀಡುತ್ತಿದ್ದರು. ನಾಟಿ ಔಷಧಿಯನ್ನು ತಯಾರಿಸಲು ಕರಿಮೆಣಸು, ಹುಚ್ಚೆಳ್ಳು, ಅಶ್ವಗಂಧ, ಕರಿಬೇವು ಬುರ್ಜ್‌ಪತ್ರೆ, ತುಳಸಿ, ವೀಳ್ಯೆದೆಲೆ, ಲವಂಚ, ಬಲಮುರಿ, ಎಡಮುರಿ, ಪಚ್ಚ ಕರ್ಪೂರ, ಜೇನುಮೇಣ, ಅಂಕೋಲೆ, ಅಂಟುವಾಳ, ಅಗ್ನಿಮಂಥ, ಅಣ್ಣೆಸೊಪ್ಪು, ಅರಿಶಿನ, ಅತಿಮಧುರ, ಅಮೃತಬಳ್ಳಿ, ಆನೆಮುಂಗು, ಇಂಗಳ, ಇಲಿಕಿವಿ ಸೊಪ್ಪು, ಉಮ್ಮತ್ತಿ, ಏಲಕ್ಕಿ, ಒಂದೆಲಗ, ಔಡಲ, ಕಂಚುವಾಳ, ಕಾಡುಗಣಗಲೆ, ಕಾಮಕಸ್ತೂರಿ, ಕಿಸುಕಾರೆ, ಕೀರೆಸೊಪ್ಪು, ಕುಪ್ಪಿಗಿಡ, ಕುಸುಕನಬಳ್ಳಿ, ಕೆಂಪುಬಸಲೆ, ಕೊಮ್ಮೆಗಿಡ, ಕ್ಷುದ್ರಅಗ್ನಿಮಂಥ, ಗಸಗಸೆ, ಗುಲಾಬಿ, ಗೋಡ್ಡುಗೇರು, ಗೊರವಿ, ಚಕ್ರಮುನಿ, ಚಪ್ಪರದವರೆ, ಚಿತ್ತಮೂಲ, ಚೊಗಚೆ, ಜಂಬೆ, ಜರೀಗಿಡ, ಜಾಪಾಳ, ತಿಲಪುಷ್ಪಿ, ತುಂಬೆಹೂ, ದತ್ತುರಿಗಿಡ, ದಾಲ್ಚನ್ನಿ, ದೊಡ್ಡಪತ್ರೆ, ನಂದಿಬಟ್ಟಲು, ನಸುಗುನ್ನಿ, ನಾಗದಂತಿ, ನಿಂಬೆಹುಲ್ಲು, ನೆಗ್ಗಿಲು, ನೆಲನೆಲ್ಲಿ, ನೋಣಿ, ಪುಂಡಿ, ಪೌದೆಮುಳ್ಳು, ಬಜೆ, ಬಾವಂಚಿ, ಬಿದಿರು, ಬಿಲ್ವಪತ್ರೆ, ಬ್ರಾಹ್ಮಿ, ಭದ್ರಾಕ್ಷಿ, ಭೃಂಗರಾಜ, ಮತ್ತಿ, ಮರಸೌತೆ, ಮರುಗ, ಮಾಚಿಪತ್ರೆ, ಮಾಧವೀಲತೆ, ಮುತ್ತುಗದ ಬಳ್ಳಿ, ಮುಳ್ಳುಹೊನ್ನೆ, ರಂಜ, ಇತ್ಯಾದಿ ಗಿಡಮೂಲಿಕೆಗಳನ್ನು ಬಳಸುತ್ತಿದ್ದರು.

**ಪೌರೋಹಿತ್ಯ**

ಕಣಿಯರು ಶುಭ ಮತ್ತು ಅಶುಭ ಕಾರ್ಯಗಳಿಗೆ ತಾವೇ ಪೌರೋಹಿತ್ಯ ವಹಿಸಿಕೊಳ್ಳುತ್ತಾರೆ. ಮದುವೆ, ಗೃಹಪ್ರವೇಶ, ನಾಮಕರಣ, ತಿಥಿ, ಮುಂತಾದ ಸಂದರ್ಭದಲ್ಲಿ ತಾವೇ ಪೂಜೆಗಳನ್ನು ನೆರವೇರಿಸುತ್ತಾರೆ. ಅಲ್ಲದೆ ಹಿಂದಿನ ಕಾಲದಲ್ಲಿ ಇತರೆ ಸಮುದಾಯದವರಿಗೂ ಕೂಡ ಪೌರೋಹಿತ್ಯ ವಹಿಸುತ್ತಿದ್ದರು. ಇದರಿಂದ ಅಲ್ಪ ಪ್ರಮಾಣದ ಹಣ ಹಾಗೂ ಧವಸ ಧಾನ್ಯ ಸಿಗುತಿತ್ತು. ಇದರಿಂದ ಇವರ ಜೀವನ ನಿರ್ವಹಣೆ ನಡೆಯುತ್ತಿತ್ತು.

**ಪಶುಪಾಲನೆ**

ಕಣಿಯ ಸಮುದಾಯದ ಬಹುತೇಕ ಜನರು ಜ್ಯೋತಿಷ್ಯ ಹೇಳುವುದು ಮತ್ತು ನಾಟಿ ಔಷದಿಯ ಜೊತೆಗೆ ಹಸು, ಎಮ್ಮೆ, ಕುರಿ, ಕೋಳಿ, ಸಾಕಾಣಿಕೆ ಮಾಡುತ್ತಿದ್ದರು ಹಾಲಿನ ಉತ್ಪನ್ನದಿಂದ ಬಂದ ಆದಾಯದಿಂದ ಜೀವನ ನಿರ್ವಹಣೆ ಮಾಡುತ್ತಿದ್ದರು, ಕೋಳಿಗಳನ್ನು ಸ್ವತಃ ತಾವೇ ಆಹಾರಕ್ಕಾಗಿ ಬಳಸುತ್ತಿದ್ದರು. ಆದರೆ ಕುರಿ, ಆಡು, ಎಮ್ಮೆ, ಹಸುಗಳನ್ನು ಮಾರಾಟ ಮಾಡುತ್ತಿದ್ದರು.

**ಕೃಷಿ ಚಟುವಟಿಕೆ**

ಕಣಿಯರು ತಮ್ಮ ಸಾಂಪ್ರದಾಯಿಕ ವೃತ್ತಿ ಮತ್ತು ಪಶುಪಾಲನೆ ಜೊತೆಗೆ ಅತ್ಯಲ್ಪ ಪ್ರಮಾಣದಲ್ಲಿ ಬೇಸಾಯ ಮಾಡುತ್ತಿದ್ದರು. ಇವರು ಪ್ರಮುಖವಾಗಿ

ರೇಷ್ಮೆ, ಭತ್ತ, ರಾಗಿ, ಜೋಳ, ಕಬ್ಬು ಇತ್ಯಾದಿಗಳನ್ನು ಬೆಳೆಯುತ್ತಿದ್ದರು. ವ್ಯವಸಾಯದ ಜೊತೆಗೆ ಕೃಷಿ ಕೂಲಿಯನ್ನು ಮಾಡಿ ಕೂಡ ಜೀವನ ಸಾಗಿಸುತ್ತಿದ್ದರು.

**ನೇಕಾರಿಕೆ**

ಕಣಿಯರು ನೇಕಾರಿಕೆ ವೃತ್ತಿಯನ್ನು ಕೂಡ ಮಾಡುತ್ತಿದ್ದರು. ಆದರೆ ನೇಕಾರಿಕೆ ಕಲೆ ಕೇವಲ ಬೆರಳೆಣಿಕೆ ಮಂದಿಗೆ ಮಾತ್ರ ತಿಳಿದಿತ್ತು. ಇವರು ರೇಷ್ಮೆಯಿಂದ ನೂಲು ತೆಗೆದು ರೇಷ್ಮೆ ಸೀರೆ ನೇಯ್ಗೆಯಲ್ಲಿ ಪರಿಣತಿಯನ್ನು ಹೊಂದಿದ್ದರು.

**ರಸ್ತೆ ಬದಿಯ ವ್ಯಾಪಾರ**

ಕಣಿಯ ಬುಡಕಟ್ಟು ಸಮುದಾಯದವರು ಕಾಡಿನೊಂದಿಗೆ ಅವಿನಾಭಾವ ಸಂಬಂಧವನ್ನು ಹೊಂದಿದ್ದರು. ಕಾಡಿನಲ್ಲಿ ದೊರೆಯುತ್ತಿದ್ದ ಹಣ್ಣುಗಳನ್ನು ಸಂಗ್ರಹಿಸಿ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಮಾರಾಟ ಮಾಡುತ್ತಿದ್ದರು. ಹಣ್ಣುಗಳ ಜೊತೆಗೆ ಜೇನು, ಮೇಣ, ಅಂಟುವಾಳ ಮುಂತಾದ ಕಿರು ಉತ್ಪನ್ನಗಳನ್ನು ಸಂಗ್ರಹಿಸಿ ಮಾರಾಟ ಮಾಡಿ ಜೀವನ ದೂಡುತ್ತಿದ್ದರು.

ಹೀಗೆ ಕಣಿಯರು ತಮ್ಮ ಜೀವನ ನಿರ್ವಹಣೆಗೆ ಒಂದೇ ಮೂಲವನ್ನು ನಂಬಿಕೊಳ್ಳದೇ ವಿವಿಧ ವೃತ್ತಿಗಳಲ್ಲಿ ತೊಡಗಿಕೊಂಡಿದ್ದರು. ಆದರೆ ಇತ್ತೀಚಿನ ದಿನಗಳಲ್ಲಿ ಬಹುತೇಕ ಜನರು ಕೃಷಿ ಕೂಲಿ ಮತ್ತು ಕೃಷಿಯನ್ನು ಅವಲಂಬಿಸಿಕೊಂಡಿದ್ದಾರೆ. ನಗರ ಪ್ರದೇಶಗಳಲ್ಲಿ ನೆಲೆಸಿರುವ ಕಣಿಯರು ಖಾಸಗಿ ಕಂಪೆನಿಗಳಲ್ಲಿ ಹಾಗೂ ಕಟ್ಟಡ ಕಾರ್ಮಿಕರಾಗಿ ದುಡಿದು ಜೀವನ ಸಾಗಿಸುತ್ತಿದ್ದಾರೆ. ಈ ಸಮುದಾಯದಲ್ಲಿ ಬಡತನ ಪ್ರಮಾಣ ಹೆಚ್ಚಿರುವುದರಿಂದ ಜೀವನ ನಿರ್ವಹಣೆ ಕಷ್ಟಕರವಾಗಿದೆ. ಬೆರಳೆಣಿಕೆ ಜನರು ಮಾತ್ರ ಮಧ್ಯಮ ವರ್ಗದವರಾಗಿದ್ದಾರೆ.

**ಪರಾಮರ್ಶನ ಗ್ರಂಥಗಳು**


- ಎಡ್ಗರ್ ಥರ್ಸ್ಟನ್. (1909). *ಕ್ಯಾಸ್ಟ್ ಅಂಡ್ ಟ್ರೈಬ್ಸ್ ಸದರನ್ ಇಂಡಿಯಾ.* ಸಂ.3, ಗೌವರ್ನಮೆಂಟ್ ಪ್ರೆಸ್.
- ಜೋಯಿಸ್, ಎಂ.ಎನ್. (1990). *ಕರ್ಮಯೋಗಿ.* ತಗಡೂರು ರಾಮಚಂದ್ರರಾಯರ ಸನ್ಮಾನ ಸಮಿತಿ.
- ಕನ್ನಡ ನಿಘಂಟು. ಕನ್ನಡ ಸಾಹಿತ್ಯ ಪರಿಷತ್ತು.
- ಮಲಬಾರ್ ಡಿಸ್ಟ್ರಿಕ್ಟ್ ಗೆಜೆಟಿಯರ್ (1908). ಕೇರಳ ಗೆಜೆಟಿಯರ್ಸ್ ಡಿಪಾರ್ಟ್ಮೆಂಟ್.
- ರೇವಣ್ಣ, ಎಲ್. (2019). *ಕಣಿಯನ್ ಜನಾಂಗದ ಸಾಂಸ್ಕೃತಿಕ ಅಧ್ಯಯನ.* ಕರ್ನಾಟಕ ಸಾಹಿತ್ಯ ಅಕಾಡೆಮಿ.
- ಸುಮಿತ್ರ, ಎಂ. (2002) ಕಣಿಯರ ಸಂಸ್ಕೃತಿ. ಮೈತ್ರೇಯ.
- ತಗಡೂರು ರಾಮಚಂದ್ರರಾವ್. (1925). ಕಣಿಯರ ವರ್ಣ ವ್ಯವಸ್ಥೆ. ಶ್ರೀ ಕೃಷ್ಣರಾಜ ವಾಣಿವಿಲಾಸ ಪ್ರೆಸ್.
- ತಗಡೂರು ರಾಮಚಂದ್ರರಾವ್. (1925 ) *ಕಣಿಯರ ಸತ್ಯಾಗ್ರಹದ ಪ್ರಕೃತ ಸ್ಥಿತಿ.* ಶ್ರೀ ರಾಮ ಪ್ರೆಸ್.